ಸಿಸಿ ನಂ. **2029/2025**
ಚಾಸಾ.**17** /ಆಸಾ **8**

<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿ.ಜೆ.ಎಂ ನ್ಯಾಯಾಲಯ , ಧಾರವಾಡ</u>

ಸಿಸಿ ನಂಃ **2029/2025**

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀನಿವಾಸ ಮೇಟಿ |
| ತಂದೆಯ ಹೆಸರುಃ | ಚಂದ್ರಪ್ಪ |
| ವಯಸ್ಸುಃ | 47 ವರ್ಷ |
| ಉದ್ಯೋಗಃ | ಪಿಐ , ಧಾರವಾಡ ಟ್ರಾಫಿಕ್ ಠಾಣೆ |
| ವಾಸಸ್ಥಳಃ | ಧಾರವಾಡ |

ಸತ್ಯ ಪ್ರತಿಜ್ಞೆ ಮೇರೆಗೆಃ **07-07-2026**

<u>ಮುಖ್ಯ ವಿಚಾರಣೆಃ ಮಾನ್ಯ ಹಿಸಸ ರವರಿಂದ</u>

ನಾನು ದಿಃ 12.02.2024 ರಿಂದ ಧಾರವಾಡ ಸಂಚಾರಿ ನಿಯಂತ್ರಣ ಪೋಲಿಸ ಠಾಣೆಯಲ್ಲಿ ಪಿಐ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿನಾಂಕ 02-08-2025 ರಂದು ಪ್ರಕರಣದ ಕಡತವನ್ನು ಚಾಸಾ16 ರವರಿಂದ ಪಡೆದು ಪರಿಶೀಲಿಸಿ ತನಿಖೆ ಮುಂದುವರೆಸಿದೆ. ಅದೇ ದಿನ ಚಾಸಾ-16 ರವರಿಗೆ ಮೃತನ ಶವಪಂಚನಾಮೆ ಜರುಗಿಸುವಂತೆ ಮೆಮೋ ನೀಡಿದ್ದೆ ಅದರಂತೆ ಕ್ರಮ ಜರುಗಿಸಿ ವರದಿ ನೀಡಿದ್ದಾರೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 28 ಎಂದು, ಸಾಕ್ಷಿಯ ಸಹಿಯನ್ನು ನಿಪಿ.28 (ಎ) ಎಂದು ಗುರುತಿಸಲಾಯಿತು. ಚಾಸಾ-1, 6 ಮತ್ತು 7 ರವರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ ಚಾಸಾ-13 ರವರಿಂದ ನಿಪಿ.23 ಮತ್ತು 24 ದಾಖಲೆ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ.

ದಿಃ 04-08-2025 ರಂದು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಚಾಸಾ-8 ರವರ ಜೊತೆ ಠಾಣೆಗೆ ಬಂದು ನನ್ನ ಮುಂದೆ ಹಾಜರಾಗಿದ್ದಾರೆ ಅವರ ವಿರುದ್ಧ ದಸ್ತಗಿರಿ ನಿಯಮಾವಳಿಗಳನ್ನು ಪಾಲಿಸಿ ಆತ ಸೂಕ್ತ ಜಾಮೀನು ನೀಡಿದ್ದರಿಂದ ಆರೋಪಿಯನ್ನು ಜಾಮೀನಿನ ಮೇಲೆ

ಬಿಟ್ಟಿದ್ದೇನೆ.ಚಾಸಾ-8 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-11 ರವರಿಗೆ ಕಲಂ.133 ಎಮ್ ವಿ ಆ್ಯಕ್ಟ ಅಡಿಯಲ್ಲಿ ನೋಟಿಸ್ಸ ನೀಡಿದ ಅವರಿಂದ ಉತ್ತರ ಪಡೆದು, ಸೂಕ್ತ ಮುಚ್ಚಳಿಕೆ ಪಡೆದು ಅಪಘಾತ ಪಡಿಸಿದ ಮಿನಿ ಗೂಡ್ಸ ವಾಹನವನ್ನು ಅವರ ಸುಪರ್ಧಿಗೆ ನೀಡಿದ್ದೇನೆ. ಸಾಕ್ಷಿಯು ಸದರಿ ನೋಟಿಸ್ಸ, ಹೇಳಿಕೆ ಮತ್ತು ಮುಚ್ಚಳಿಕೆ ಪತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.29 ರಿಂದ 31 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 29 (ಎ) ರಿಂದ 31 (ಎ) ಎಂದು ಗುರುತಿಸಲಾಯಿತು.

ದಿಃ 05-08-2025 ರಂದು ಚಾಸಾ-15 ರವರಿಂದ ನಿಪಿ.26 ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 12-08-2025 ರಂದು ಚಾಸಾ-10 ರವರಿಗೆ ಕಲಂ.133 ಎಮ್ ವಿ ಆ್ಯಕ್ಟ ಅಡಿಯಲ್ಲಿ ನೋಟಿಸ್ಸ ನೀಡಿದ ಅವರಿಂದ ಉತ್ತರ ಪಡೆದು, ಸೂಕ್ತ ಮುಚ್ಚಳಿಕೆ ಪಡೆದು ಅಪಘಾತ ಪಡಿಸಿದ ಮೋಟರ ಸೈಕಲನ್ನು ಅವರ ಸುಪರ್ಧಿಗೆ ನೀಡಿದ್ದೇನೆ. ಸಾಕ್ಷಿಯು ಸದರಿ ನೋಟಿಸ್ಸ, ಹೇಳಿಕೆ ಮತ್ತು ಮುಚ್ಚಳಿಕೆ ಪತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.32 ರಿಂದ 34 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 32 (ಎ) ರಿಂದ 34 (ಎ) ಎಂದು ಗುರುತಿಸಲಾಯಿತು.

ದಿಃ 22-08-2025 ರಂದು ಚಾಸಾ-14 ರವರಿಂದ ನಿಪಿ.25 ರ ದಾಖಲೆ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 29-09-2025 ರಂದು ಪ್ರಕರಣದ ತನಿಖೆ ಕಾಲದಲ್ಲಿ ಚಿತ್ರಿಕರಿಸಿದ ವಿಡಿಯೋ ಮತ್ತು ಪೋಟೋಗಳ ಡಿವಿಡಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಸಾಕ್ಷಿಯು ಸದರಿ ಡಿವಿಡಿ ನೋಡಿ ಗುರುತಿಸಿದ್ದು ಅದನ್ನು ನಿಪಿ.35 ಎಂದು ಗುರುತಿಸಲಾಯಿತು.

ತನಿಖೆಯಿಂದ ಆರೋಪಿತರು ಅಪರಾಧವೆಸಗಿದ್ದಾರೆ ಎಂದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಅವರ ವಿರುದ್ಧ ದೋಷಾರೋಪನಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

ಪಾಟೀ ಸವಾಲು**:** ಆರೋಪಿಯು ತಮ್ಮ ವಕೀಲರು ಗೈರು ಹಾಜರಿದ್ದಾರೆ ನಾನೇ ಪಾಟೀ ಸವಾಲು ಮಾಡುತ್ತೇನೆ ಅಂತಾ ಹೇಳಿದ್ದರಿಂದ ಅನುಮತಿ ನೀಡಲಾಯಿತು**.**

ಮೃತ ಆರೋಪಿ 1 ನೇ ಆರೋಪಿ ವಾಹನಕ್ಕೆ ಹಿಂದಿನ ಭಾಗಕ್ಕೆ ಡಿಕ್ಕಿ

ಪಡಿಸಿದ್ದ ಮತ್ತು ಗಾಯಾಳುವನ್ನು ಚಾಸಾ-8 ಮತ್ತು 1 ನೇ ಆರೋಪಿ ಸೇರಿ ಆಸ್ಪತ್ರೆಗೆ ದಾಖಲು ಪಡಿಸಿದ್ದಾರೆ ಎಂದರೆ ಸರಿಯಲ್ಲ.

ತನಿಖೆಯಿಂದ 1 ನೇ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಮತ್ತು ಮೃತ ಆರೋಪಿಯ ಅತೀ ವೇಗ ಹಾಗೂ ನಿರ್ಲಕ್ಷದ ಚಾಲನೆಯಿಂದ ಅಪಘಾತವ ಾಗಿದೆ ಎಂದು ಕಂಡು ಬಂದರೂ ಸಹಿತ ಮೃತನ ಕುಟುಂಬದವರಿಗೆ ಪರಿಹಾರ ಧನ ಸಿಗಲಿ ಅಂತಾ ಈ ಕೇಸಿಗೆ ಪೂರಕವಾಗುವಂತೆ ಸಾಕ್ಷಿದಾರರ ಹೇಳಿಕೆಗಳನ್ನು ಠಾಣೆಯಲ್ಲಿ ತಯಾರಿಸಿಕೊಂಡು ಅದಕ್ಕೆ ಪೂರಕವಾಗುವಂತೆ ಸುಳ್ಳು ದೋಷಾರೋಪನಾ ಪತ್ರವನ್ನು ಸಲ್ಲಿಸಿದ್ದೇನೆ ಮತ್ತು ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ